ಅಸಲು ದಾವೆ ನಂ.67/2022

ಪಿ.ಡಬ್ಲೂ: 1- ರಾಮಚಂದ್ರ ರೆಡ್ಡಿ ಬಿನ್ ಪಾಪಿ ರೆಡ್ಡಿ

ಆದೇಶ ದಿನಾಂಕ 06/06/2024 ರ ಮೇರೆಗೆ ಸಾಕ್ಷಿಯನ್ನು ಇಂದು ದಿನಾಂಕಃ 06/06/2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರವಾಗಿ ಶ್ರೀ ಎಸ್.ಎ.ಹೆಚ್. ವಕೀಲರಿಂದ**

ನಾನು ಈ ದಾವೆಯಲ್ಲಿ ಕೆಳಕಂಡ ಹೆಚ್ಚುವರಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಿಶಾನೆ ಪಿ-22- ಸುಂದ್ರಪಾಳ್ಯ ಗ್ರಾಮದ ಸ.ನಂ.95/3 ರ ಪಹಣಿ ಪತ್ರಿಕೆ

ನಿಶಾನೆ ಪಿ-23- ಸುಂದ್ರಪಾಳ್ಯ ಗ್ರಾಮದ ಸ.ನಂ.95/1 ರ ಪಹಣಿ ಪತ್ರಿಕೆ

ನಿಶಾನೆ ಪಿ-24- ಕಲಾವಿಹೊಸಹಳ್ಳಿ ಗ್ರಾಮದ ಸ.ನಂ.67 ರ ಪಹಣಿ ಪತ್ರಿಕೆ

ನಿಶಾನೆ ಪಿ-25- ಸುಂದ್ರಪಾಳ್ಯ ಗ್ರಾಮದ ಸ.ನಂ.95/13 ರ ಪಹಣಿ ಪತ್ರಿಕೆ

ನಿಶಾನೆ ಪಿ-26- ಸುಂದ್ರಪಾಳ್ಯ ಗ್ರಾಮದ ಸ.ನಂ.95/16 ರ ಪಹಣಿ ಪತ್ರಿಕೆ

ನಿಶಾನೆ ಪಿ-27- ಸುಂದ್ರಪಾಳ್ಯ ಗ್ರಾಮದ ಸ.ನಂ.8/1 ರ ಪಹಣಿ ಪತ್ರಿಕೆ

ಆದ್ದರಿಂದ ಮೇಲಿನ ದಾಖಲೆಗಳನ್ನು ನನ್ನ ದಾವೆಯಲ್ಲಿ ಪರಿಗಣಿಸಬೇಕಾಗಿ ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

**ಮುಂದುವರೆದ ಪಾಟೀ ಸವಾಲು 2 ಮತ್ತು 7 ನೇ ಪ್ರತಿವಾದಿಯರ ಪರವಾಗಿ ಶ್ರೀ ಎನ್.ಎಸ್. ವಕೀಲರಿಂದ**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)

ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ

ಕೆಜಿಎಫ್

ಅಸಲು ದಾವೆ ನಂ.67/2022

ಪಿ.ಡಬ್ಲೂಃ 1- ರಾಮಚಂದ್ರ ರೆಡ್ಡಿ ಬಿನ್ ಪಾಪಿ ರೆಡ್ಡಿ

ದಿನಾಂಕಃ 06/06/2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು 2 ಮತ್ತು 7 ನೇ ಪ್ರತಿವಾದಿಯರ ಪರವಾಗಿ ಶ್ರೀ ಎನ್.ಎಸ್. ವಕೀಲರಿಂದ**

1. ನಿಪಿ-21 ದಾಖಲೆಯು ನಾನು ಈ ದಾವೆ ದಾಖಲಿಸುವಾಗ ನನ್ನ ವಶದಲ್ಲಿತ್ತು. ನಾನು ನನ್ನ ಬೆಳೆಗಳನ್ನು ಮಾರಾಟ ಮಾಡಿ ಹಣ ಸಂಪಾದಿಸಿದ್ದೆ ಎಂದು ನನ್ನ ವಾದ ಪತ್ರದಲ್ಲಾಗಲಿ ಅಥವಾ ಪ್ರಮಾಣ ವಚನದಲ್ಲಾಗಲಿ ಕೇಳಿರುವುದಿಲ್ಲ. ನಾನು ಕೃಷಿ ಭೂಮಿ ಹೊಂದಿರುತ್ತೇನೆ ಮತ್ತು ಅದರಲ್ಲಿ ಬೆಳೆಗಳನ್ನು ಬೆಳೆಯುತ್ತೇನೆ ಎಂದು ತೋರಿಸಲು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಬ್ಯಾಂಕ್ ಖಾತೆ ಹೊಂದಿರುತ್ತೇನೆ. ನಾನು ಬೆಳೆ ಮಾರಾಟ ಮಾಡಿ ಪಡೆಯುವ ಹಣವನ್ನು ನನ್ನ ಬ್ಯಾಂಕ್ ಖಾತೆಯಲ್ಲಿ ಇಡುವುದಿಲ್ಲ. ನಾನು ಬೆಳೆಗಳನ್ನು ಬೆಳೆಸಲು ಎಷ್ಟು ಹಣ ವೆಚ್ಚ ಮಾಡಿರುತ್ತೇನೆ ಮತ್ತು ಎಷ್ಟು ಲಾಭ ಸಂಪಾದಿಸಿರುತ್ತೇನೆ ಎಂದು ತೋರಿಸಲು ದಾಖಲೆಗಳನ್ನು ಇಟ್ಟಿರುವುದಿಲ್ಲ. ನನ್ನ ಹೆಸರಿನಲ್ಲಿ 2 ಎಕರೆ ಜಮೀನು ಇರುತ್ತದೆ. ನಾನು ಅದರಲ್ಲಿ ಟೊಮೊಟೋ, ಎಲೆಕೋಸು, ಬೀನ್ಸ್ ಹೂವು ಹಾಗೂ ಆಲುಗಡ್ಡೆ ಬೆಳೆಯುತ್ತೇನೆ. ಸಾಮಾನ್ಯವಾಗಿ ಒಂದು ಎಕರೆ ಭೂಮಿಯಲ್ಲಿ ಒಂದು ಬೆಳೆ ಬೆಳೆಸಲು ಅಂದಾಜು ರೂ.30,000/-ಗಳ ಖರ್ಚು ಬರುತ್ತದೆ. ನಾನು ನಿಪಿ-21 ರಸೀದಿಗಳಲ್ಲಿ ಪಡೆಯುವ ಹಣವು ನನ್ನ ಒಟ್ಟು ಸಂಪಾದನೆಯಾಗಿದ್ದು ಅದರಲ್ಲಿ ಖರ್ಚು ಸಹ ಒಳಗೊಂಡಿರುತ್ತದೆ. ನಾನು ಯಾವುದೇ ಬೆಳೆಗಳನ್ನು ಬೆಳೆಸಿರುವುದಿಲ್ಲ, ಅವುಗಳನ್ನು ಮಾರಾಟ ಮಾಡಿರುವುದಿಲ್ಲ ಮತ್ತು ಅದರಿಂದ ಹಣ ಪಡೆದುಕೊಂಡಿರುವುದಿಲ್ಲ ಆದರೂ ಸಹ ನಿಪಿ-21 ರಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನಕಲಿ ಅಂಗಡಿಯ ಹೆಸರಿನಲ್ಲಿ ರಸೀದಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ರಸೀದಿಗಳಲ್ಲಿ ನಾನು ಯಾವುದೇ ಹಣವನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು 1 ಮತ್ತು 3 ರಿಂದ 6 ನೇ ಪ್ರತಿವಾದಿಯರ ಪರ ಶ್ರೀ ಪಿ.ವಿ.ಟಿ. ವಕೀಲರಿಂದ**

ಪ್ರತಿವಾದಿಯರು ಹಾಗೂ ಅವರ ಪರ ವಕೀಲರನ್ನು ಕೂಗಿಸಲಾಯಿತು. ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)

ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ

ಕೆಜಿಎಫ್